# ಭಾರತೀಯ ಜನತಾ ಪಾರ್ಟಿ

## (ಕೇಂದ್ರ ಕಚೇರಿ)

## 11, ಅಶೋಕ ರಸ್ತೆ, ನವದೆಹಲಿ–110001

**Tel. No. :** 23005700; **Fax :** 23005787

**ದಿನಾಂಕ: ಏಪ್ರಿಲ್ 2,2013**

**ಭಾಜಪ ರಾಷ್ಟ್ರೀಯ ವಕ್ತಾರೆ ಶ್ರೀಮತಿ ನಿರ್ಮಲ ಸೀತಾರಾಂ ಅವರ ಪತ್ರಿಕಾ ಪ್ರಕಟಣೆ**

ಸಂಸದೀಯ ಸಮಿತಿಗಳ ಸುಗಮ ಕಾರ್ಯಾಚರಣೆಗೆ ನಿರಂತರ ಮತ್ತು ಸತತ ಅಡಚಣೆ ಉಂಟು ಮಾಡುತ್ತಿರುವ ಕಾಂಗ್ರೆಸ್ ಪಕ್ಷದ ವರ್ತನೆಯನ್ನು ಭಾಜಪ ಒಪ್ಪುವುದಿಲ್ಲ. ಸಾರ್ವಜನಿಕ ಲೆಖ್ಖ ಸಮಿತಿ ತನ್ನ ಜವಾಬ್ದಾರಿ ನಿರ್ವಹಿಸದಂತೆ ಈ ಮುನ್ನ ಅದು ತಂಟೆ ತಕರಾರು ಎಬ್ಬಿಸಿತ್ತು.

2ಜಿ ತರಂಗಾಂತರ ಹಂಚಿಕೆ ಹಗರಣದ ತನಿಖೆ ವಿಚಾರದಲ್ಲಿಯೂ ಜಂಟಿ ಸಂಸದೀಯ ಸಮಿತಿ(ಜೆಪಿಸಿ) ನಿರ್ಮಿಸಲು ಹಿಂದೇಟು ಹಾಕಿದ ಕಾಂಗ್ರೆಸ್ ಪಕ್ಷದ ಆಡಂಬರವನ್ನು ಇಡೀ ರಾಷ್ಟ್ರ ವೀಕ್ಷಿಸಿತ್ತು. ಪ್ರಕರಣದ ಅಪರಾಧಗಳ ವಿಚಾರಣೆಯನ್ನು ನ್ಯಾಯಾಲಯ ನಡೆಸುತ್ತಿರುವುದರಿಂದ ಜೆಪಿಸಿ ಅಗತ್ಯವಿಲ್ಲವೆಂದು ಯುಪಿಎ ಸರ್ಕಾರದ ಹಲವಾರು ಸಚಿವರು ಬಹಿರಂಗ ಹೇಳಿಕೆಗಳನ್ನು ನೀಡಿದ್ದರು. ಈ ವಿಚಾರದಲ್ಲಿ ವಾದ ವಿವಾದ ನಡೆದು ಸಂಸತ್‌ನ ಇಡೀ ಅಧಿವೇಶನ(2011ರ ಚಳಿಗಾಲದ ಅಧಿವೇಶನ) ಸಂಪೂರ್ಣ ಹಾಳಾಯಿತು. ಯುಪಿಎ ಸರ್ಕಾರ ಮಂಜೂರು ಮಾಡಿದ ಎಲ್ಲ 122 ತರಂಗಾಂತರ ಲೈಸೆನ್ಸ್‌ಗಳನ್ನು ಸರ್ವೋಚ್ಚ ನ್ಯಾಯಾಲಯ ರದ್ದು ಗೊಳಿಸಿರುವ ವಿಷಯ ಈಗ ಸಾರ್ವತ್ರಿಕಗೊಂಡಿದೆ.

ಸಾರ್ವಜನಿಕರ ಒತ್ತಡ ಮತ್ತು ಭ್ರಷ್ಟಾಚಾರ ಹಗರಣದ ವ್ಯಾಪ್ತತೆಗೆ ಬೆದರಿ, ಜೆಪಿಸಿ ಸ್ಥಾಪಿಸುವ ಬೇಡಿಕೆಗೆ ಸರ್ಕಾರ ಮಣಿಯಬೇಕಾಯಿತು. ಆದರೆ ಈ ಭ್ರಷ್ಟ ಪ್ರಕರಣದ ತನಿಖೆಯಲ್ಲಿ ಪ್ರಗತಿಗಿಂತಲೂ ಅಡಚಣೆಗಳ ಸುದ್ದಿ ಮಾಧ್ಯಮಗಳಲ್ಲಿ ಹೆಚ್ಚು ವರದಿಯಾಗುತ್ತಿವೆ.

ಜೆಪಿಸಿ ಕಾರ್ಯವೈಖರಿಯ ಕುರಿತು ಭಾಜಪ ಸದಸ್ಯರು ನಿರಂತರವಾಗಿ ಪ್ರಶ್ನಿಸುತ್ತಾ ಬಂದಿದ್ದಾರೆ.

ಗಮನಿಸಬೇಕಾದ ವಿಚಾರವೆಂದರೆ, ಹಗರಣದ ಪ್ರಮುಖ ರೂವಾರಿ, ಮಾಜಿ ಸಚಿವ ಎ.ರಾಜಾ ಖುದ್ದು ಜೆಪಿಸಿ ಮುಂದೆ ಬರಲು ಅವಕಾಶ ಕಲ್ಪಿಸಬೇಕು ಎಂದು ಕೋರಿದ್ದಾರೆ. ಅದರೆ ಈ ಬೇಡಿಕೆಯನ್ನು ಅಧ್ಯಕ್ಷರು ಏಕಪಕ್ಷೀಯವಾಗಿ ತಿರಸ್ಕರಿಸಿದ್ದಾರೆ. ಸಂಸದೀಯ ಸಮಿತಿ ಸರ್ವಾನುಮತದ ಮೇಲೆ ಕಾರ್ಯವಹಿಸಬೇಕು.

ಸಮಿತಿಯ ಮುಂದೆ ಸಚಿವರು ಹಾಜರು ಆಗುವ ಪರಿಪಾಠ, ಭಾರತೀಯ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೊಸದಲ್ಲ. ಈ ಹಿಂದೆ 1992ರಲ್ಲಿ ಡಾ.ಮನಮೋಹನ್ ಸಿಂಗ್ ಅವರೂ ಸಹ ಜೆಪಿಸಿ ಮುಂದೆ ಹಾಜರಾಗಿದ್ದರು ಮತ್ತು ಭಾಜಪದ ಶ್ರೀ ಯಶವಂತ್ ಸಿನ್ಹಾ ಅವರೂ ಕೂಡ ಜೆಪಿಸಿ ಮುಂದೆ ಹಾಜರಾಗಿದ್ದರು.

ಪ್ರಧಾನ ಮಂತ್ರಿಗಳೂ ಸಹ ಒಬ್ಬ ಸಜ್ಜನ ವ್ಯಕ್ತಿಯಂತೆ ಸಾರ್ವಜನಿಕ ಲೆಖ್ಖ ಸಮಿತಿ ಮುಂದೆ ಹಾಜರಾಗಲು ತಮ್ಮ ಸಮ್ಮತಿಯನ್ನು 2011ರಲ್ಲಿ ಬುರಾರಿಯಲ್ಲಿ ನಡೆದ ಎಐಸಿಸಿ ಸಭೆಯಲ್ಲಿ ವ್ಯಕ್ತಪಡಿಸಿದ್ದರು. ಪ್ರಧಾನಿ ಆದವರನ್ನು ಪಿಎಸಿ ಕರೆಯಲು ಅಸಾಧ್ಯವೆಂಬುದು ತಿಳಿದಿರುವ ವಿಚಾರವಾಗಿದೆ.

ಕಾರ್ಯಾಂಗ, ಅದರಲ್ಲೂ ವಿಶೇಷವಾಗಿ ರಾಜಕೀಯ ಕಾರ್ಯಾಂಗವು ಸಂಸತ್‌ನ ಪರ ನಿಷ್ಠೆ ತೊರಬೇಕಿದ್ದು, ಅದರ ಹೊಣೆಗಾರಿಕೆ ಖಚಿತ ಪಡಿಸುವ ಜವಾಬ್ದಾರಿಯು ಪ್ರಕರಣದ ತನಿಖೆ ಮಾಡುವ ಜೆಪಿಸಿಗೆ ಇರಬೇಕಾಗಿದೆ.

ಜೆಪಿಸಿ ಮುಂದೆ ಹಾಜರಾಗಲು ಎ.ರಾಜಾ ಅನುಮತಿ ಕೋರಿದ್ದರೂ, ಅವರಿಗೆ ಅನುಮತಿ ನೀಡಲಾಗುತ್ತಿಲ್ಲ. ಪ್ರಕರಣ ಕುರಿತ ನಿರ್ಣಯಗಳನ್ನು ಅಂದಿನ ಹಣಕಾಸು ಸಚಿವರೊಂದಿಗೆ ಸೇರಿಕೊಂಡು, ಪ್ರಧಾನ ಮಂತ್ರಿಗಳ ವಿಶ್ವಾಸಗಳಿಸಿದ ನಂತರವೇ ತೆಗೆದುಕೊಳ್ಳಲಾಯಿತು ಎಂದು ಶ್ರೀ ರಾಜಾ ಹಲವು ಬಾರಿ ಹೇಳಿದ್ದಾರೆ. 2ಜಿ ಕಡತವನ್ನು ತಾವು ನೋಡಿ ಮುಂದೆ ಕಳಿಸಿದ ನಂತರ ಎ.ರಾಜಾ ಅದರಲ್ಲಿ ಹೆಚ್ಚಿನ ಸಾಲುಗಳನ್ನು ಸೇರಿಸಿದ್ದಾರೆ ಎಂಬ ಭಾರತದ ಎಟಾರ್ನಿ ಜನರಲ್ ಅವರ ಹೇಳಿಕೆ ಹಲವಾರು ಪ್ರಶ್ನೆಗಳಿಗೆ ಕಾರಣವಾಗಿದೆ.

ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಮಾಜಿ ಹಣಕಾಸು ಸಚಿವ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವ ಮತ್ತು ಜೆಪಿಸಿಯ ಭಾಜಪ ಸದಸ್ಯರಾದ ಶ್ರೀ ಯಶವಂತ್ ಸಿನ್ಹಾ ಅವರು ಜೆಪಿಸಿ ಅಧ್ಯಕ್ಷರಿಗೆ ಹಲವು ಬಾರಿ ಪತ್ರ ಬರೆದು, ಅದಕ್ಕೆ ಯಾವುದೇ ಉತ್ತರ ಲಭಿಸದ ಕಾರಣ, ಪ್ರಧಾನ ಮಂತ್ರಿಗಳು ಮತ್ತು ಸಭಾಧ್ಯಕ್ಷರಿಗೆ ಅವರು ಪತ್ರ ಬರೆಯಬೇಕಾಯಿತು.

ಪ್ರಧಾನ ಮಂತ್ರಿಗಳು ಮತ್ತು ಈಗಿನ ಹಣಕಾಸು ಸಚಿವರು ಇಬ್ಬರೂ ಕೂಡ ಜೆಪಿಸಿ ಮುಂದೆ ಹಾಜರಾಗಬೇಕು ಎಂದು ಭಾಜಪ ಆಗ್ರಹಿಸುತ್ತದೆ. ಅವರ ಬೇಡಿಕೆಯಂತೆ, ಎ.ರಾಜಾ ಅವರನ್ನೂ ಸಹ ಜೆಪಿಸಿ ಮುಂದೆ ಹಾಜರು ಪಡಿಸಬೇಕು.

ಮುಕ್ತ, ನ್ಯಾಯೋಚಿತ ಮತ್ತು ವಿಸ್ತೃತವಾದ ತನಿಖೆಗೆ ಅವಕಾಶ ಕಲ್ಪಿಸಿ ಜೆಪಿಸಿಯ ಕಾರ್ಯದಲ್ಲಿ ಪ್ರಗತಿಗೆ ಅವಕಾಶ ನೀಡಬೇಕಾಗಿದೆ.

(ಓ.ಪಿ.ಕ್ಹೊಲಿ)

ಮುಖ್ಯ ಕಚೇರಿ ಪ್ರಭಾರಿ